ಕಾರು ನೋಡಿದ್ದೆ ಹುಡುಗರು 'ಉಯ್...' ಅಂತ ಓಡಿ ಬಂದವು. 'ಏ ದೂರ ನಿಲ್ಲರಿ...' ಎಂದು ಸರದು ನಿಂತ. ಮೊದಲ ಬಾರಿ ಕೇರಿಗೆ ಗೌಡರು ಕಾರು ತಂದಾಗ ತಾನು ಹೀಗೆ ಚೆಡ್ಡಿ ಏರಿಸಿಗಂಡು ಬಂದದ್ದನ್ನು, ಗೌಡರು ಗದರಿಸಿ ಕಳಿಸಿದ್ದನ್ನು ನೆನಪು ಮಾಡಿಕೊಂಡ.

ಈಗೊಂದು ಹದಿನೈದು ವರ್ಷದ ಹಿಂದೆ ಇದೇ ಕೇರಿಯ ಮೂಲೆಯಲ್ಲಿ ದುರುಗಪ್ಪ ಸಾಹುಕಾರ ವಾಸವಾಗಿದ್ದ. ಆಗ ಗೌಡರ ಬಾಯಲ್ಲಿ 'ದುರುಗ' ಆಗಿದ್ದವನು ಈಗ 'ದುರುಗಪ್ಪ ಸಾಹುಕಾರ' ಆಗಿದ್ದ.

ಹತ್ತು ವರ್ಷ ಇರುವಾಗಲೇ ಗೌಡರ ಹೊಲಕ್ಕ ದುಡ್ಯಾಕ ಹೋತಿದ್ದ. ನಿಯತ್ತಿನಿಂದ ಕೆಲಸ ಮಾಡುತ್ತಿದ್ದ. ಹೇಳಿದ ಕೆಲಸವನ್ನು ಅಂದಂದೆ ಮುಗಿಸುತ್ತಿದ್ದ. ಮನೆ ಕೆಲಸನು ಮಟ್ಟಸನ ಮಾಡುತ್ತಿದ್ದ. ಒಂದು ಹತ್ತು ವರ್ಷ ಬಿಡದಂಗ ಅವರ ಮನೆಯಲ್ಲೇ ದುಡುದಿದ್ದ. ಇದರಿಂದ ಗೌಡರ ಗಮನ ಸೆಳೆದಿದ್ದ. ಚುನಾವಣೆಗೆ ನಿಂತಾಗ ಕೇರಿ ಮಂದಿಗೆ ದುಡ್ಡು, ಸಾರಾಯಿ ಹಂಚಲು ಇವನನ್ನೇ ನಂಬುತ್ತಿದ್ದರು. ಸರಿಯಾಗಿ ಎಲ್ಲಾ ಲೆಕ್ಕ ಕೊಡುತ್ತಿದ್ದ. ಕೇರಿ ಮಂದಿನೂ ಈತನನ್ನು ನಂಬುತ್ತಿದ್ದರು. ಪ್ರತಿ ಚುನಾಣೆಯಲ್ಲಿ ಗೌಡರೆ ಅನಾಯಸವಾಗಿ ಗೆದ್ದು ಬರುತ್ತಿದ್ದರು. ಚುನಾವಣೆ ಬಂತೆಂದರೆ ಇವನನ್ನು ಜೊತೆಗೆ ಒಯ್ಯುತ್ತಿದ್ದರು. ದುಡ್ಡಿನ ಚೀಲವನ್ನು ಅವನ ಕೈಯಲ್ಲೇ ಕೊಡುತ್ತಿದ್ದರು.

ಹದಿನೈದು ವರ್ಷದ ಹಿಂದೆ ಈ ಗ್ರಾಮ ಮೀಸಲು ಕ್ಷೇತ್ರವಾಯಿತು. ಆಗ ಗೌಡರಿಗೆ ಪಜೀತಿ ಆಯಿತು. ಅವರು ಐದಾರು ಸಾರಿ ಗೆದ್ದಿದ್ದರು. ಮುಂದೆ ಗೆದ್ದರೆ ಅವರೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಆಗುತ್ತಿದ್ದರು. ಅದೇ ಕನಸಿನಿಂದನೆ ಚುನಾವಣೆಗೆ ಮನಸ್ಸೇಚ್ಛೆ ಖರ್ಚು ಮಾಡುತ್ತಿದ್ದರು. 'ಏನಪಿದು ಎಂಎಲ್ಎ ಎಲೆಕ್ಷನ್ ಮಾಡಿದಂಗ ಮಾಡ್ತೀಯಲಪಾ' ಎಂದು ಆತನ ಹಿಂಬಾಲಕರು ಅನ್ನುತ್ತಿದ್ದರು. 'ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಆಗಬೇಕಂದರ ಇಷ್ಟು ಮಾಡಕೇಬೇಕು' ಎನ್ನುತ್ತಿದ್ದರು. ಮೀಸಲು ಕ್ಷೇತ್ರ ಆದ ಮೇಲೆ ಅವರು ಚುನಾವಣೆಗೆ ನಿಲ್ಲಲು ಸಾಧ್ಯವಿರಲಿಲ್ಲ. ಬೇರೆ ಹಳ್ಳಿಗೆ ಮೀಸಲು ಬದಲಾಯಿಸಲು ಸಾಕಷ್ಟು ಓಡಾಡಿದ್ದರು. ಅದು ದೊಡ್ಡ ರಗಳೆ ಆಗುತ್ತೆಂದು ಬದಲಾಯಿಸಲು ಒಪ್ಪಿರಲಿಲ್ಲ. ಪಾರ್ಟಿಯವರು 'ಬೇರೆ ಗ್ರಾಮಕ್ಕ ನಿಂದ್ರು. ಗೆಲ್ಲಿಸಿ ತರುತೀವಿ' ಎಂದು ಹೇಳಿದರು. ಆದರೆ ಗೌಡರು ಒಪ್ಪಲಿಲ್ಲ. ಇದ್ದೂರಲ್ಲೇ ರಾಜಕಾರಣ ಮಾಡಿದರ ಚೆಂದ.' ಎಂದು ಯೋಚನೆ ಮಾಡಿ ದುರುಗನನ್ನು ಚುನಾವಣೆಗೆ ನಿಲ್ಲಿಸಿದರು. ನೆಪಕ್ಕಷ್ಟೆ ಅವನಿದ್ದ. ಎಲ್ಲ ಗೌಡರೆ ನೋಡಿಕಂತಿದ್ದರು. ಎರಡು ಸಾರಿ ಚುನಾವಣೆಯಲ್ಲಿ ಗೆಲ್ಲಿಸಿದರು.

ಜಿಲ್ಲಾ ಪಂಚಾಯಿತಿ ಸದಸ್ಯನಾದ ಮೇಲೆ ಗೌಡರು 'ನೀನಿನ್ನು ಕೇರ್‍ಯಾಗ ಇರಾದು ಬ್ಯಾಡ. ನಮ್ಮ ನೆಲ್ಲು ಇಡೋ ಗೋದಾಮಿನ್ಯಾಗ ಬಂದಿರು' ಎಂದು ಅಲ್ಲೇ ಇರಲು ಜಾಗ ಕೊಟ್ಟಿದ್ದರು. ತಮ್ಮೂರಿಗೆ ಅಧ್ಯಕ್ಷ ಸ್ಥಾನ ಕೊಡಬೇಕಂದು ಬಹಳಷ್ಟು ಸಲ ಪಾರ್ಟಿಯವರನ್ನ ಪೀಡಿಸಿದ. ಎಷ್ಟು ರೊಕ್ಕ ಬೇಕಾದರ ಚೆಲ್ಲುತೀನಿ ಅಂದ. 'ಅಲ್ಲಪಾ ನೀನು ನಿಲ್ಲೋದಿಲ್ಲ. ಆ ದರುಗನ್ನ ನಿಲ್ಲಿಸುತ್ತಿದ್ದಿ. ನಿನಗೆ ಏನು ಫಾಯದೆ ಐತಿ. ಅವನೇನಾದರೂ ಒಳ್ಳೆ ನಿಂತರ ಏನು ಮಾಡುತ್ತಿ' ಎಂದಿದ್ದರು. 'ಇಲ್ಲಾ ಅವನು ಹಂಗಿಲ್ಲ. ಅವನತ್ತಿರ ಅಧಿಕಾರ ಇದ್ದರ ನನ್ನತ್ರ ಇದ್ದಾಂಗ' ಎಂದಿದ್ದರು. ಪಾರ್ಟಿಯವರು ಮುಂದಿನ ಸಾರಿ ಅಧ್ಯಕ್ಷ ಸ್ಥಾನ ನಿಮ್ಮೂರಿಗೆ ಕೊಡ್ತೀವಿ ಅಂದಿದ್ದರು. ಅದರಂತೆ ಮುಂದಿನ ಚುನಾವಣೆಯಲ್ಲಿ ಗೆದ್ದಾಗ ಅಧ್ಯಕ್ಷ ಪದವಿಯನ್ನು ಕೊಟ್ಟರು. ಸದಸ್ಯನಾಗಿದ್ದ ದುರುಗ ಅಧ್ಯಕ್ಷನಾದ ಮೇಲೆ ಜನರ ಬಾಯಲ್ಲಿ ದುರುಗಪ್ಪ ಸಾಹುಕಾರ ಆದ.

ಸರಕಾರಿ ಕಾರು, ಬಂಗ್ಲೆ, ಪೊಲೀಸರು ಅಧಿಕಾರಿಗಳು, ಸಿಬ್ಬಂದಿಯವರು ಸುತ್ತ ಮುತ್ತ ಇರದನ್ನು ನೋಡಿದ ಜನ ದುರುಗಪ್ಪ ಸಾಹುಕಾರ ಎಂದೇ ಕರೆಯಲು ಸುರು ಮಾಡಿದರು. ಮೀಸಲಾತಿ ಮುಗಿವರೆಗೆ ಅವನನ್ನು ಅಂಕೆಯಲ್ಲಿ ಇಟ್ಟುಕೊಳ್ಳಬೇಕಂದು ಎಲ್ಲಾ ದರ್ಶನ ಮಾಡಸಿದರು. ತಾವು ಅನುಭವಿಸುತ್ತಿದ್ದ ಎಲ್ಲಾ ಅನುಭವಗಳಲ್ಲಿ ಸೇರಿಸಿಕೊಂಡರು. ಬೆಂಗಳೂರಿಗೆ ಕರೆದುಕೊಂಡು ಹೋದರು. ಐಸಾರಾಮಿ ಹೋಟಲುಗಳು, ವೇಶ್ಯೆಯರು, ಪಾರ್ಟಿಗಳು, ಅಧಿಕಾರಿಗಳನ್ನು ಪರಿಚಯಿಸಿದರು. 'ನೀನು ಅನುಭವಿಸಲೆ. ಇದೆಲ್ಲಾ ಇರಬೇಕಲೆ. ಆಗನೆ ಪಾರ್ಟಿಯಲ್ಲಿ ಬೆಲೆ. ಇಲ್ಲಂದರ ಯಾರು ಕೇಳೋದಿಲ್ಲ. ಅದಕ್ಕ ಯಾವುದೇ ಯೋಜನೆ ಬರಲಿ. ಮೊದಲು ನಮ್ಮ ಪಂಚಾಯಿತಿಗೆ ಬರ್‍ರಂಗ ಮಾಡಬೇಕಂದರ ಬೆಂಗಳೂರಿಗೆ ಬಂದು ಇಷ್ಟು ಮಾಡಬೇಕು. ಆಗಾಗ ಈ ಅಧಿಕಾರಗಳಿಗೆ

